# ಮುನ್ನೆಚ್ಚರಿಕೆಯ ಮದ್ದು



**ಮಕ್ಕಳ ಬೆಳವಣಿಗೆ ಅಸಹಜವಾಗಿದ್ದಾಗ ಅದನ್ನು ಗುರ್ತಿಸುವಲ್ಲಿ ಪೋಷಕರೇ ಪರೀಕ್ಷಕರ ಪಾತ್ರ ನಿರ್ವಹಿಸಬೇಕಾಗುತ್ತದೆ.**

■ ಸ್ವಯಂಪ್ರಭಾ

ಸೆರೆಬ್ರಲ್ ಪಾಲ್ಸಿ ಎನ್ನುವುದು ಮಕ್ಕಳಲ್ಲಿ ಆದಷ್ಟು ಬೇಗನೇ ಗುರುತಿಸಬೇಕಾದ ಒಂದು ದೈಹಿಕ ನ್ಯೂನತೆ. ದೇಹವೊಂದರಲ್ಲಿ ಹಲವು ನ್ಯೂನತೆಗಳಿದ್ದು, ದೇಹದ ಒಟ್ಟು ಸಮತೋಲನಕ್ಕೆ ಮತ್ತು ಚಲನೆಗೆ ತೊಡಕಾದಾಗ ಅದನ್ನು ಸೆರೆಬ್ರಲ್ ಪಾಲ್ಸಿ ಎಂದು ಗುರುತಿಸಲಾಗುತ್ತದೆ. ಸಾಮಾನ್ಯವಾಗಿ, ಕೆಲವು ಸಂದರ್ಭಗಳಲ್ಲಿ ಯಾವುದಾದರೂ ತೊಂದರೆಯಿದ್ದಾಗ, ಅದನ್ನು ಸರಿದೂಗಿಸಿಕೊಂಡು ಜೀವನ ನಡೆಸುವುದು ಕಷ್ಟವಾಗುವುದಿಲ್ಲ. ಆದರೆ ಈ ತೊಂದರೆಗಳ ಪ್ರಮಾಣವು ಒಂದು ಮಿತಿಗಿಂತ ಹೆಚ್ಚಾದಾಗ ಮಗುವಿನ ಚಲನೆಗೆ ತೊಡಕಾಗುತ್ತದೆ. ಆಗ ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ಸಾಧ್ಯವಾದಷ್ಟು ಬೇಗನೇ ಆರಂಭಿಸುವುದರಿಂದ ದೈಹಿಕ ಸ್ಥಿತಿಯು ಸುಧಾರಿಸುತ್ತದೆ.

ಇದು ಕೇವಲ ದೈಹಿಕ ನ್ಯೂನತೆಯಷ್ಟೇ ಆಗಬೇಕಾಗಿಲ್ಲ, ಮಾನಸಿಕವಾಗಿಯೂ ಕೆಲವು ಏರುಪೇರುಗಳು ಕಾಣಿಸಿಕೊಳ್ಳಬಹುದು. ಮಾತು ಹಾಗೂ ದೈಹಿಕ ಬೆಳವಣಿಗೆಗೆ ತೊಡಕಾಗಬಹುದು. ಹಾಗಾಗಿ ಅದಕ್ಕೆ ಬೇಕಾದ ಚಿಕಿತ್ಸೆಗಳನ್ನೂ ಆರಂಭಿಸಬೇಕಾಗುತ್ತದೆ. ಮಗುವಿನ ಹಿತದೃಷ್ಟಿಯಿಂದ, ಈ ನ್ಯೂನತೆಯನ್ನು ಬೇಗನೆ ಗುರುತಿಸಿದಷ್ಟು ಉತ್ತಮ.

ಸೆರೆಬ್ರಲ್ ಪಾಲ್ಸಿ ಹೆಚ್ಚಾಗಿ ಬಾಲಕರಲ್ಲಿ ಕಾಣಿಸಿಕೊಳ್ಳುವ ತೊಂದರೆ. ಅನೇಕ ಸಂದರ್ಭಗಳಲ್ಲಿ ದೇಹದಲ್ಲಿ ನರಗಳ ಬಿಗಿತವೇ ಮಕ್ಕಳ ಚಲನೆಗೆ ತೊಡಕುಂಟು ಮಾಡುತ್ತದೆ. ಮಗುವಿಗೆ ಈ ತೊಂದರೆಯು ಶೇ. 50ರಿಂದ 60ರಷ್ಟು ಇದ್ದರೆ ಮಗು ನಡೆದಾಡಲು ತೊಂದರೆಯೇನೂ ಇರುವುದಿಲ್ಲ. ಆದರೆ ಅವರ ನಡೆಯು ತುಸು ಭಿನ್ನವಾಗಿರುತ್ತದೆ.

ಅವಧಿಗಿಂತ ಮುಂಚೆಯೇ ಮಗು ಹುಟ್ಟುವುದು, ಅವಳಿ ಅಥವಾ ತ್ರಿವಳಿ ಮಕ್ಕಳು ಹುಟ್ಟಿದಾಗ, ಗರ್ಭಿಣಿಯರಿಗೆ ಸೋಂಕು ಆದಾಗ, ನವಜಾತ ಶಿಶುಗಳ ಆರೋಗ್ಯ ಹದಗೆಟ್ಟು ತೀವ್ರ ಚಿಕಿತ್ಸೆ ಎದುರಿಸಬೇಕಾಗಿ ಬಂದಾಗಲೆಲ್ಲ ಈ ಸೆರೆಬ್ರಲ್ ಪಾಲ್ಸಿ ಸಮಸ್ಯೆ ಸೃಷ್ಟಿಯಾಗುವ ಸಂಭವವಿದೆ. ಇದಕ್ಕೆ ನಿರ್ದಿಷ್ಟವಾದ ಕಾರಣವೇನು ಎಂದು ಗುರುತಿಸುವುದು ಕಷ್ಟ ಎಂದು ವೈದ್ಯಕೀಯ ಜಗತ್ತು ಹೇಳುತ್ತದೆ.

ಐದು ವರ್ಷದೊಳಗಿನ ಮಗುವನ್ನು ಸೂಕ್ಷ್ಮವಾಗಿ ಗಮನಿಸುವುದೊಂದೇ ಸೆರೆಬ್ರಲ್ ಪಾಲ್ಸಿಯನ್ನು ಪತ್ತೆ ಮಾಡಲು ಇರುವ ಮೊದಲ ದಾರಿ. ಆರು ತಿಂಗಳೊಳಗಿನ ಮಗು ಪದೇ ಪದೇ ತಲೆಯನ್ನು ಅಗತ್ಯಕ್ಕಿಂತ ಹೆಚ್ಚು ಮುಂದಕ್ಕೆ ಅಥವಾ ಹಿಂದಕ್ಕೆ ಬಗ್ಗಿಸುತ್ತಿದ್ದರೆ ಅಥವಾ ಅಂಗಾಂಗಗಳ ಚಲನೆ ಸಾಧ್ಯವಾಗದೇ ಗಟ್ಟಿಯಾಗಿದ್ದರೆ, ಕಾಲುಗಳನ್ನು ಒಂದರ ಮೇಲೊಂದು ಕತ್ತರಿಯಂತೆ ಹಾಕುತ್ತಿದ್ದರೆ, ಅಂತಹ ಮಗುವನ್ನು ಈ ರೋಗ ಇರಬಹುದೇ ಎಂದು ಗಮನಿಸುವುದು ಒಳಿತು.

ಆರು ತಿಂಗಳ ನಂತರದ ಮಗು ಮಗ್ಗುಲು ಬದಲಾಯಿಸದೇ ಇದ್ದಾಗ, ಕೈಗಳನ್ನು ಬಾಯಿಗಿಡಲು ಕಷ್ಟವಾಗುತ್ತಿದ್ದರೆ, ಒಂದು ಕೈಯನ್ನು ಬಳಸುವಾಗ ಮತ್ತೊಂದು ಕೈಯನ್ನು ಬಹಳ ಬಿಗಿಯಾಗಿ ಹಿಡಿಯುತ್ತಿದ್ದರೆ ಅದು ಸೆರೆಬ್ರಲ್ ಪಾಲ್ಸಿ ಲಕ್ಷಣವೆಂದು ಅನುಮಾನಿಸಬೇಕು.

ಮಗುವಿನ ಬೆಳವಣಿಗೆ ಕುಂಠಿತವಾದಾಗ ವೈದ್ಯರನ್ನು ಭೇಟಿಯಾಗುವುದು ಉತ್ತಮ. ಮಕ್ಕಳಿಗೆ ಗಾಳಿ ಸೋಂಕಿದೆ, ದೃಷ್ಟಿಯಾಗಿದೆ ಎಂಬೆಲ್ಲ ನಂಬಿಕೆಗಳಿಗೆ ಜೋತು ಬೀಳದೇ ವೈದ್ಯರೊಡನೆ ಸಮಾಲೋಚನೆ ನಡೆಸಿದಾಗ ಎರಡು ರೀತಿಯ ಮಾರ್ಗದರ್ಶನ ದೊರೆಯುತ್ತದೆ:

ಮೊದಲನೆಯದಾಗಿ, ಹುಟ್ಟಿದ ಮಗುವಿನ ಬಗ್ಗೆ ಅಪಾರ ಕನಸುಗಳನ್ನು ಕಟ್ಟಿಕೊಂಡ ಪೋಷಕರು, ಮಗುವಿನ ಬೆಳವಣಿಗೆ ಕುಂಠಿತವಾದರೆ ತೀವ್ರ ಆಘಾತಕ್ಕೊಳಗಾಗಿ ಬಿಡುತ್ತಾರೆ. ವೈದ್ಯರು ಅಮ್ಮ ಮತ್ತು ಅಪ್ಪನೊಡನೆ ಸಮಾಲೋಚನೆ ನಡೆಸಿ ಪರಿಸ್ಥಿತಿಯನ್ನು ಎದುರಿಸಲು ಬೇಕಾದ ಆತ್ಮವಿಶ್ವಾಸವನ್ನು ತುಂಬುತ್ತಾರೆ. ಮನೆಯೊಂದರಲ್ಲಿ ಮಗುವಿದೆ ಎಂದರೆ ಸದಾ ನಗು, ಹುಮ್ಮಸ್ಸು ತುಂಬಿರುವುದು ಸಹಜ. ಬಂಧುಗಳು, ಸ್ನೇಹಿತರು ಮಗುವಿನೊಡನೆ ಮಾತನಾಡುವುದು, ಅವರ ಹುಟ್ಟುಹಬ್ಬಕ್ಕೆ ಶುಭ ಹಾರೈಸುವುದು, ಮಗುವಿನ ಕ್ಷೇಮ ಕುಶಲವನ್ನು ಆಗಾಗ ವಿಚಾರಿಸುವುದು ಸಹಜವಾದ ಪ್ರಕ್ರಿಯೆ. ಆದರೆ ಮಗುವಿನ ಬೆಳವಣಿಗೆ ಸೀಮಿತವಾದಾಗ, ಬಂಧುಗಳು, ಒಡನಾಡಿಗಳು ಅನೇಕ ಪ್ರಶ್ನೆಗಳನ್ನು ಕೇಳಲಾರಂಭಿಸುತ್ತಾರೆ. ಅವುಗಳಿಗೆ ಉತ್ತರಿಸುವುದು, ಪ್ರತಿಯೊಬ್ಬರು ನೀಡುವ ಸಲಹೆಗಳನ್ನು ಸ್ವೀಕರಿಸುವುದು ಪೋಷಕರ ಪಾಲಿಗೆ ಅತೀ ದೊಡ್ಡ ಸವಾಲಿನ ವಿಷಯವೇ ಸರಿ. ಆದ್ದರಿಂದ ಸಮಾಜವನ್ನು ಎದುರಿಸಲು ಬೇಕಾದ ಧೈರ್ಯವನ್ನು ಪೋಷಕರು ತಂದುಕೊಳ್ಳಬೇಕಾದರೆ ವೈದ್ಯರ ಸಾಂತ್ವನದ, ಸಲಹೆ ಸೂಚನೆಗಳ ಅಗತ್ಯವಿದೆ.

ಕುಟುಂಬದ ಇತರ ಸದಸ್ಯರು ಪೋಷಕರ ಜೊತೆಗೆ ನಿಲ್ಲಬೇಕಾಗುತ್ತದೆ. ಪೋಷಕರ ಸಿಟ್ಟು, ಅಸಹನೆಯಂತಹ ವರ್ತನೆಗಳನ್ನು ಮನ್ನಿಸಿ ಅವರೊಡನೆ ಇರುವುದು ಮುಖ್ಯ. ನ್ಯೂಕ್ಲಿಯರ್ ಕುಟುಂಬವೆಂದು ಇತರ ಸಂಬಂಧಿಕರು ಮಗುವನ್ನು ಮತ್ತಷ್ಟು ದೂರ ಮಾಡುವುದು ಸರಿಯಲ್ಲ. ಈ ನ್ಯೂನತೆ ಇರುವ ಮಕ್ಕಳಿಗೆ ಕುಟುಂಬದ ಬೆಂಬಲ ಅತೀ ಅಗತ್ಯ. ಎಷ್ಟೋ ಸಂದರ್ಭಗಳಲ್ಲಿ ಸಣ್ಣ ಪ್ರಮಾಣದ ನ್ಯೂನತೆಗಳಿದ್ದಾಗ, ಮಗುವು ತನ್ನ ತಮ್ಮನನ್ನೋ ತಂಗಿಯನ್ನೋ ನೋಡಿ ಬೆಳೆಯಲಾರಂಭಿಸುತ್ತದೆ.

ವೈದ್ಯರಿಂದ ದೊರೆಯುವ ಎರಡನೇ ಅನುಕೂಲ – ಮಗುವಿಗೆ ಬೇಕಾದ ಚಿಕಿತ್ಸೆಯ ಮಾಹಿತಿಯನ್ನು ವೈದ್ಯರು ನೀಡುತ್ತಾರೆ. ಬೇಗನೇ ಚಿಕಿತ್ಸೆ ಆರಂಭಿಸಿದಷ್ಟೂ ನ್ಯೂನತೆಯನ್ನು ಕಡಿಮೆ ಮಾಡುವುದು ಸಾಧ್ಯ.

ಮಕ್ಕಳಿಗೆ ಯಾವುದೇ ತೊಂದರೆಯಾದಾಗ ನಂಬಿಕೆಗಷ್ಟೇ ಜೋತು ಬೀಳದೇ ವೈದ್ಯರ ಬಳಿಗೆ ಹೋಗುವುದೇ ಪೋಷಕರ ಆದ್ಯ ಕರ್ತವ್ಯವಾಗಬೇಕು.

ಪ್ರತಿಕ್ರಿಯಿಸಿ: feedback@sudha.co.in